<u>ಸಿವಿಲ್ ನ್ಯಾಯಾಧೀಶರು ಮತ್ತು ಜೆಎಮ್ಎಫ್‌ಸಿ, ಸಂಚಾರಿ ನ್ಯಾಯಾಲಯ</u>

<u>ರಟ್ಟಿಹಳ್ಳಿ</u>

<u>ಕ್ರಿಮಿನಲ್ ಮೊಕದ್ದಮೆ ನಂಃ 297/2018</u>

ಸಿ.ಡಬ್ಲ್ಯೂ-17 ಪಿ.ಡಬ್ಲ್ಯೂ-9

ಸಾಕ್ಷಿಯ ಹೆಸರು ಃಅರವಿಂದ ಬಿ ಎಸ್

ತಂದೆಯ ಹೆಸರು ಃಸೋಮಶೇಖರಪ್ಪ

ವಯಸ್ಸು ಃ 38 ವರ್ಷ

ಉದ್ಯೋಗ ಃ ಪಿ ಎಸ್ ಐ ಜಿಲ್ಲಾ ವಿಶೇಷ ವಿಭಾಗ ದಾವಣಗೆರೆ

ವಾಸಸ್ಥಳ ಃ ದಾವಣಗೆರೆ

ದಿನಾಂಕಃ 10-06-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ</u>** ಸಸಅ ರವರಿಂದಃ

ದಿ. 22.11.2017 ರಿಂದ 15.07.2019 ರವರೆಗೆ ರಟ್ಟಿಹಳ್ಳಿ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 20.02.2018 ರಂದು ರಾತ್ರಿ 10.30 ಗಂಟೆಗೆ ಚಾಸಾ-1 ರವರು ರಾಣೇಬೆನ್ನೂರು ಒಂ ಆಸ್ಪತ್ರೆಯಲ್ಲಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಗುನ್ನಾ ನಂ. 49/2018 ರಡಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ. ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಿ.ಪಿ.ಸಿ. 877 ರ ಮುಖಾಂತರ ಕಳುಹಿಸಿಕೊಟ್ಟು ನನ್ನ ಮೇಲಾಧಿಕಾರಿಗಳಿಗೆ ತಿಳಿಸಿರುತ್ತೇನೆ. ದಿನಾಂಕ 21.02.2018 ರಂದು ಸದರಿ ಪ್ರಕರಣದಲ್ಲಿ ಚಿಕಿತ್ಸೆಗಾಗಿ ರಾಣೇಬೆನ್ನೂರಿನ ಒಂ ಆಸ್ಪತ್ರೆಯಲ್ಲಿ ದಾಖಲಾಗಿದ್ದು ಗಾಯಾಳು ಹನುಮಂತಪ್ಪ ಯಲ್ಲಪ್ಪ ಯಡಗೋಡ ಇವರು ಆಸ್ಪತ್ರೆಯಲ್ಲಿ ಮರಣ ಹೊಂದಿದ್ದು ಸದರಿ ವಿಷಯವನ್ನು ನನ್ನ ಮೇಲಾಧಿಕಾರಿಗೆ ತಿಳಿಸಿ ಮಾನ್ಯ ನ್ಯಾಯಾಲಯಕ್ಕೆ ಕಲಂ.304(ಎ) ಅಳವಡಿಸಿಕೊಳ್ಳಲು ಮನವಿಯನ್ನು ಕೋರಿಕೊಂಡಿರುತ್ತೇನೆ. ನಂತರ ಸದರಿ ಮಾಹಿತಿಯನ್ನು ಚಾಸಾ-19 ರವರಿಗೆ

ತಿಳಿಸಿ ಅವರ ಮೌಖಿಕ ಆದೇಶದ ಮೇರೆಗೆ ಚಾಸಾ-15 ಮತ್ತು ಚಾಸಾ-16 ರವರನ್ನು ಮೃತನ ಶವ ಪಂಚನಾಮೆಯನ್ನು ಜರುಗಿಸಲು ನೇಮಕ ಮಾಡಿ ಕಳುಹಿಸಿಕೊಟ್ಟಿರುತ್ತೇನೆ. ನಂತರ ಸದರಿ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-19 ರವರಿಗೆ ವಹಿಸಿಕೊಟ್ಟಿರುತ್ತೇನೆ. ಸಾಕ್ಷಿಗೆ ಕಡತದಲ್ಲಿರುವ ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ಪಿರ್ಯಾದಿ ಎಂದು ನೋಡಿ ಗುರುತಿಸಿದ್ದು, ಪಿರ್ಯಾದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ -1 ಎಂದು ಗುರುತಿಸಲಾಗಿರುತ್ತದೆ, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಅದನ್ನು ಈಗ ನಿ ಪಿ -1(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-28 ಎಂದು , ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಅದನ್ನು ನಿ ಪಿ -28(ಎ) ಎಂದು ಗುರುತಿಸಲಾಯಿತು. ಮಾನ್ಯ ನ್ಯಾಯಾಲಯಕ್ಕೆ ಕೋರಿಕೊಂಡ ಮನವಿ ಪತ್ರವನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿ ಪಿ -29 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಅದನ್ನು ನಿ ಪಿ -29(ಎ) ಎಂದು ಗುರುತಿಸಲಾಯಿತು.

**<u>ಪಾಟೀಸವಾಲುಃ</u>** ಆರೋಪಿ ಪರ ಎಸ್ ಹೆಚ್ ಪಿ ವಕೀಲರ ಪರವಾಗಿ ಶ್ರೀ. ಎಮ್ ಬಿ ಪಿ .ವಕೀಲರಿಂದ ಃ

ದಿನಾಂಕ 20.02.2018 ರಂದು ಒಂ ಆಸ್ಪತ್ರೆಯಲ್ಲಿ ನಾನು ಮತ್ತು ಚಾಸಾ-15 ರವರು ಪಿರ್ಯಾದಿಯ ದೂರನ್ನು ಸ್ವೀಕರಿಸಿಕೊಂಡಿರುತ್ತೇವೆ. ಪಿರ್ಯಾದಿಯನ್ನು ಬರೆಯಲು ಚಾಸಾ-1 ರವರು ಮಾಹಿತಿ ನೀಡಿರುತ್ತಾರೆ. ಪಿರ್ಯಾದಿಯನ್ನು ರಿಯಾಜ್ ಎಂಬುವವರು ಬರೆದಿರುತ್ತಾರೆ. ಈ ಹಂತದಲ್ಲಿ ಆರೋಪಿ ಪರ ವಕೀಲರು ಸದರಿ ರಿಯಾಜ್ ರವರನ್ನು ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ ಎಂದು ಪ್ರಶ್ನೆ ಕೇಳಿರುತ್ತಾರೆ ಸದರಿ ಪ್ರಶ್ನೆ ಅಸಮಂಜಸವಾಗಿದ್ದರಿಂದ

ತಿರಸ್ಕರಿಸಲಾಯಿತು. ಆರೋಪಿತನ ತಪ್ಪಿನಿಂದ ಅಪಘಾತವಾಗದೇ ಇದ್ದರು ಸಹ ಗಾಯಾಳು ಹಾಗೂ ಗಾಯಾಳುವಿನ ವಾರಸುದಾರರಿಗೆ ಅನುಕೂಲವಾಗಲಿ ಎಂದು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

Sd/-
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ,
ಸಂಚಾರಿ ನ್ಯಾಯಾಲಯ, ರಟ್ಟಿಹಳ್ಳಿ